250ರಿಂದ 300 ಕೈದಿಗಳನ್ನು ಜೈಲಿನಲ್ಲಿ ಹಾಕಿರುವುದು ಸರ್ಕಾರದ ಗಮನಕ್ಕೆ ಬಂದಿದಯೆ?

ಆ) ಮಂಗಳೂರಿನ ಸಬ್‌ಜೈಲಿನಲ್ಲಿ ಭದ್ರತೆಯ ದೃಷ್ಟಿಯಿಂದ ಕೈಗೊಂಡಿರುವ ಕ್ರಮಗಳೇನು?

ಇ) ಎಷ್ಟು ಕೈದಿಗಳಿಗನುಗುಣವಾಗಿ ಸಿಬ್ಬಂದಿಗಳ ನೇಮಕಾತಿ ಆಗಬೇಕಾಗಿದೆ. ಅನುಮತಿ ಕೊಟ್ಟ ಹುದ್ದೆಗಳು ಎಷ್ಟು; ಈಗ ಇರುವ ಸಿಬ್ಬಂದಿಗಳು ಎಷ್ಟು?

ಈ) ಈಗಿರುವ ಕಟ್ಟಡಗಳು, ಗೋಡೆಗಳು ಭದ್ರತೆಯ ದೃಷ್ಟಿಯಿಂದ ಸುರಕ್ಷಿತವೇ?

ಉ) ವಿದ್ಯುತ್ ವೈಫಲ್ಯ ಆದಾಗ ಸುರಕ್ಷತೆಯ ದೃಷ್ಟಿಯಿಂದ ಡೀಸಲ್ ವಿದ್ಯುತ್ ಜನರೇಟರನ್ನು ಒದಗಿಸಲು ಸರ್ಕಾರ ಕ್ರಮ ಕೈಕೊಳ್ಳುವುದೇ?

ಶ್ರೀ ಮಿರಾಜುದ್ದೀನ್ ಪಟೇಲ್ (ಕಾರಾಗೃಹ ರಾಜ್ಯ ಸಚಿವರು):-

ಆ) ಹೌದು. ದಿನಾಂಕ 1-09-95ರಂದು ಜಿಲ್ಲಾ ಕಾರಾಗೃಹ, ಮಂಗಳೂರಿನಲ್ಲಿ ಒಟ್ಟು 174 ಬಂದಿಗಳು ಇದ್ದು ಅವರ ವಿವರ ಈ ಕೆಳಕಂಡಂತಿದೆ:

ಪುರುಷರು	ಮಹಿಳೆಯರು	ಒಟ್ಟು
167	7	174

ಸಾಮಾನ್ಯವಾಗಿ ಈ ಕಾರಾಗೃಹದಲ್ಲಿ 250ರಿಂದ 300 ಕೈದಿಗಳು ಬಂಧನದಲ್ಲಿರುವುದಿಲ್ಲ. ಒಂದೊಂದು ವೇಳೆ ಅನಿರೀಕ್ಷಿತ ಕಾನೂನು ಮತ್ತು ಸುವ್ಯವಸ್ಥೆ ಸಂದರ್ಭದಲ್ಲಿ ಅಂದರೆ ಜನ ಸಮೂಹದಿಂದ ಉಂಟಾಗುವ ಮುಷ್ಕರ ಇತ್ಯಾದಿಗಳಿಂದ ನ್ಯಾಯಾಲಯಗಳ ಆದೇಶದ ಮೇರೆಗೆ ಹೆಚ್ಚಿನ ಬಂದಿಗಳು ದಾಖಲಾಗುವ ಸಂಭವವಿರುತ್ತದೆ. ಅಂತಹ ಸಂದರ್ಭಗಳಲ್ಲಿ ಹೆಚ್ಚಿನ ಸಂಖ್ಯೆಯ ಬಂದಿಗಳನ್ನು ಕೇಂದ್ರ ಕಾರಾಗೃಹ ಬೆಂಗಳೂರಿಗಾಗಲಿ ಅಥವಾ ಮೈಸೂರಿಗಾಗಲಿ ಸಂಸ್ಥೆಯ ಆಡಳಿತ ಹಾಗೂ ಭದ್ರತೆಯ ಹಿತದೃಷ್ಟಿಯಿಂದ ವರ್ಗ ಮಾಡಲಾಗುತ್ತದೆ. ಹಾಗೂ ಈ ಬಗ್ಗೆ ಸಂಬಂಧಪಟ್ಟ ನ್ಯಾಯಾಲಯಗಳಿಂದ ಮುಂಚಿತವಾಗಿ ಆದೇಶಗಳನ್ನು ಪಡೆಯಲಾಗುವುದು.

ಆ) 1)ಕಟ್ಟಡಗಳ ದುರಸ್ತಿಗಾಗಿ 1984-85ರಿಂದ 1995-96 (31-8-95)ರವರೆಗೆ ಒಟ್ಟು 5.63 ಲಕ್ಷ ರೂಪಾಯಿಗಳ ಕಾಮಗಾರಿಗಳಿಗೆ ಮಂಜೂರಾತಿ ನೀಡಲಾಗಿದೆ.

2) 2 ಡೋರ್ ಫ್ರೇಂ ಮತ್ತು 5 ಹ್ಯಾಂಡ್ ಹೆಲ್ಡ್ ಮೆಟಲ್ ಡಿಟೆಕ್ಟರ್‌ಗಳನ್ನು ಒದಗಿಸಿದೆ.

ಇ) ಒಂದು ಕಾರಾಗೃಹಕ್ಕೆ ಬೇಕಾಗುವ ಕನಿಷ್ಟ ಕಾವಲು ಸಿಬ್ಬಂದಿಗಳ ನೇಮಕಾತಿ ಕೈದಿಗಳ ಸಂಖ್ಯೆಗನುಗುಣವಾಗಿರದೇ ಆಯಾ ಕಾರಾಗೃಹಗಳ ವೈಶಿಷ್ಟತೆ, ಭದ್ರತೆ ಕಟ್ಟಡ ವಿನ್ಯಾಸ ಶಿಸ್ತು ಮತ್ತು ಕಾವಲು ಸಿಬ್ಬಂದಿಯನ್ನು ನೇಮಿಸಬೇಕಾದ ಆಯಕಟ್ಟಿನ ಸ್ಥಳಗಳು ಇತ್ಯಾದಿಗಳ ಮೇಲೆ ಅವಲಂಬಿಸಿರುತ್ತದೆ. ಸದ್ಯಕ್ಕೆ ಮಂಗಳೂರು ಜಿಲ್ಲಾ ಕಾರಾಗೃಹಕ್ಕೆ ಒಟ್ಟು 24 ಕಾವಲು ಸಿಬ್ಬಂದಿಗಳ ಹುದ್ದೆಗಳು ಮಂಜೂರಾಗಿದ್ದು ಇವುಗಳಲ್ಲಿ 17 ಜನ ಸಿಬ್ಬಂದಿಗಳು ಕಾರ್ಯ ನಿರ್ವಹಿಸುತ್ತಿದ್ದಾರೆ.

ಈ) ಹೌದು.

ಉ) ಹೌದು.

ವಿಷಯ: ಮಂಗಳೂರಿನ ಪೊಲೀಸ್ ಸ್ಟೇಷನ್ ಮತ್ತು ವಸತಿಗೃಹಗಳು.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1646 (2118)

ಶ್ರೀ ಎನ್. ಯೋಗೇಶ್ ಭಟ್ (ಮಂಗಳೂರು): ಮಾನ್ಯ ಗೃಹ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ

ದಯವಿಟ್ಟು ಉತ್ತರಿಸುವರೆ?

ಅ) ಮಂಗಳೂರಿನ ಕದ್ರಿ ಪೋಲೀಸ್ ಠಾಣೆ ಬಾಡಿಗೆ ಕಟ್ಟಡದಲ್ಲಿ ಇದ್ದು ಸಿಬ್ಬಂದಿ ಕಷ್ಟದಿಂದ ಕೆಲಸ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) 1974ರಲ್ಲಿ ಪೋಲೀಸ್ ಸ್ಟೇಷನ್‌ಗಳಿಗೆ ಸ್ಥಳ ಮಂಜೂರು ಆದರೂ ಯಾವುದೇ ರೀತಿಯ ಕಟ್ಟಡ ಅನುದಾನ ಸಿಗದೇ ತೊಂದರೆ ಆಗಿರುವುದರಿಂದ ತಕ್ಷಣ ಅನುಷ್ಠಾನಕ್ಕೆ ಬರುವಂತೆ ಕಟ್ಟಡಗಳಿಗೆ ಸಂಬಂಧಪಟ್ಟ ಕಟ್ಟಡ ಅನುದಾನ ಬಿಡುಗಡೆ ಮಾಡಲು ಸರ್ಕಾರಕ್ಕೆ ಯಾವುದಾದರೂ ತೊಂದರೆಗಳು ಇವೆಯೇ?

ಇ) ಇಲ್ಲದಿದ್ದಲ್ಲಿ ಯಾವಾಗ ಹಣ ಬಿಡುಗಡೆ ಮಾಡಲಾಗುವುದು.

ಈ) ಶಕ್ತಿನಗರದ 98 ಪೋಲೀಸ್ ವಸತಿ ಗೃಹಗಳ ಹಾಗೂ ಮಂಗಳೂರಿನಲ್ಲಿರುವ ಪೊಲೀಸ್ ವಸತಿ ಗೃಹಗಳು ತಕ್ಷಣ ದುರಸ್ತಿ ಮಾಡಲು ಸರಕಾರ ಕ್ರಮ ಕೈಗೊಳ್ಳುವುದೇ?

ಶ್ರೀ ಪಿ.ಜಿ.ಆರ್. ಸಿಂಧ್ಯ (ಗೃಹ ಸಚಿವರು):

ಅ) ಹೌದು.

ಆ) 1993-94ರಲ್ಲಿ ಈ ಸ್ಟೇಷನ್ನಿಗೆ 8.5 ಲಕ್ಷ ರೂಗಳ ವೆಚ್ಚದಲ್ಲಿ ಒಂದು ಹೊಸ ಕಟ್ಟಡ ನಿರ್ಮಾಣ ಮಾಡಲು ಆಧ್ಯತಾ ಪಟ್ಟಿಯಲ್ಲಿ ಸೇರಿಸಿ ಕರ್ನಾಟಕ ರಾಜ್ಯ ಪೋಲಿಸ್ ವಸತಿ ನಿಗಮಕ್ಕೆ ವಹಿಸಲಾಗಿದೆ. ಆದರೆ ವಸತಿ ನಿಗಮಕ್ಕೆ ಹಣಕಾಸಿನ ಮುಗ್ಗಟ್ಟಿನಿಂದಾಗಿ ಕೆಲಸ ಪ್ರಾರಂಭಿಸಲು ಸಾಧ್ಯವಾಗಿಲ್ಲ. ನಿಗಮವು ಹಣಕಾಸು ಸಂಸ್ಥೆಗಳಿಂದ ಸಾಲ ಪಡೆಯಲು ಸಾಧ್ಯವಾದರೆ ಈ ಕಟ್ಟಡವನ್ನೂ ಕೈಗೆತ್ತಿಕೊಳ್ಳಲಾಗುವುದು.

ಇ) ಮೇಲಿನಂತೆ.

ಈ) ಶಕ್ತಿನಗರದ 98 ಪೊಲೀಸ್ ವಸತಿ ಗೃಹಗಳ ಬಗೆಗೆ ಯಾವದೇ ಗಂಭೀರವಾದ ಸಮಸ್ಯೆ ಅಥವಾ ದೂರು ಘಟಕಾಧಿಕಾರಿಗಳಿಂದ (ಎಸ್.ಪಿ.ಮಂಗಳೂರು) ವರದಿ ಮಾಡಿಲ್ಲ. ಪ್ರಸಕ್ತ ಸಾಲಿನಲ್ಲಿ ಈ ಘಟಕಕ್ಕೆ 5 ಲಕ್ಷ ರೂ ವಸತಿ ಗೃಹಗಳ ರಿಪೇರಿಗೆ ಬಿಡುಗಡೆ ಮಾಡಲಾಗಿದ್ದು ಆಧ್ಯತೆಯ ಆಧಾರದ ಮೇಲೆ ರಿಪೇರಿ ಮಾಡಬೇಕಾದ ಗೃಹಗಳ ದುರಸ್ತಿಯನ್ನು ಘಟಕಾಧಿಕಾರಿಗಳೇ ಮಾಡಿಸುತ್ತಾರೆ.

ವಿಷಯ: ಕೈದಿಗಳಿಗೆ ಪೋಲೀಸ್ ಎಸ್ಕಾರ್ಟ್.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1647 (2158)

ಶ್ರೀ ಎಸ್.ಯೋಗೀಶ್ ಭಟ್ (ಮಂಗಳೂರು): ಮಾನ್ಯ ಕಾರಾಗೃಹಗಳ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕೈದಿಗಳನ್ನು ಅನಾರೋಗ್ಯದ ಸಂದರ್ಭಗಳಲ್ಲಿ ಆಸ್ಪತ್ರೆಗೆ ಕೊಂಡೊಯ್ಯಲು ಪೊಲೀಸ್ ಎಸ್ಕಾರ್ಟ್ ಸರಿಯಾಗಿ ಸಿಗುವಂತೆ ವ್ಯವಸ್ಥೆ ಮಾಡಲಾಗುವುದೆ?

ಆ) ಸಬ್ ಜೈಲಿನಲ್ಲಿ ಎಷ್ಟು ರೈಫಲ್‌ಗಳಿವೆ, ಎಷ್ಟು ಪಿಸ್ತೂಲುಗಳಿವೆ, ಅವುಗಳು ಸುಸ್ಥಿತಿಯಲ್ಲಿವೆಯೇ?

ಇ) ಸಿಬ್ಬಂದಿಗಳ ವಸತಿಗೃಹ ತೀರ ಕಳಪೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?